



ನವೆಂಬರ್ ಸಂಚಿಕೆ ವಿಭಿನ್ನ ರೀತಿಯ ಮೌಲ್ಯಾಧಾರಿತ ಕತೆಗಳು ಹಾಗೂ ಲೇಖನಗಳಿಂದ ಮನಸ್ಸಿಗೆ ಮುದ ನೀಡಿತು. 'ನಂದಾದೀಪ'ದ ಶೀರ್ಷಿಕೆಯಡಿ ನಮ್ಮನ್ನಗಲಿದ ಮೂವರು ಸಾಧಕರ ಪರಿಚಯ ಮಾಡಿದ್ದು ಅನನ್ಯವಾಗಿತ್ತು.

**ಎಂ.ಕೆ. ಮಂಜುನಾಥ್, ಬೆಂಗಳೂರು**

ಕತೆಗಾರ ವೀರಭದ್ರ ಅವರ ಬಗೆಗಿನ ಲೇಖನ (ಮಲೆಯೂರು ಗುರುಸ್ವಾಮಿ) ಓದಿ ಖುಷಿಯಾಯಿತು. ಅವರ ಅನುವಾದಿತ ಕಾದಂಬರಿ 'ಅನಾಥ ಪಕ್ಷಿ'ಯನ್ನು ಅನೇಕ ಬಾರಿ ಓದಿದ್ದೇನೆ. ಕನ್ನಡದ ಸೊಗಡನ್ನು ಬಿಂಬಿಸುವ ಭಾಷೆ ಅವರದು.

**ಎಚ್.ಎಸ್. ಸತ್ಯನಾರಾಯಣ ರಾವ್, ಅರಕಲವಾಡಿ**

ಈ ಬಾರಿಯ 'ನಂದಾದೀಪ' ವಿಶೇಷವಾಗಿತ್ತು. 70–80ರ ದಶಕದಲ್ಲಿ ವೀರಭದ್ರ ಅವರ ಕತೆಗಳನ್ನು ಓದಿದ ನೆನಪು ಮರುಕಳಿಸಿತು.

**ಎನ್. ಮಹಾದೇವ, ಚೆನ್ನೈ**

ಕಲಾವಿದ ಎಂ.ಬಿ. ಪಾಟೀಲರ ಕುರಿತ ಎಚ್.ಎ. ಅನಿಲ್‌ಕುಮಾರ್ ಅವರ ಲೇಖನ ಚೆನ್ನಾಗಿತ್ತು. ಕಲೆಗೆ ಬೆಲೆ ಎಂದಿಗೂ ಇದೆ ಎಂಬುವುದಕ್ಕೆ ಸಾಕ್ಷಿ ಈ ಲೇಖನ. ಪಾಟೀಲರ ಕಲಾಕೃತಿಗಳು ಎಂದಿಗೂ ಜನರ ಮನದಿಂದ ಮರೆಯಾಗುವುದಿಲ್ಲ.

**ಚಿದಾನಂದ ಕಳಸಮ್ಮ ರೂಳೆನವರ್, ಕಲಬುರ್ಗಿ**

'ಸೌದಾಮಿನಿಯ ರಂಗವಲ್ಲಿ' (ಮಧುರಾ ಕರ್ಣಮ್) ಕತೆ ಕುತೂಹಲಕಾರಿ ತಿರುವುಗಳಿಂದ ತುಂಬಾ ಇಷ್ಟವಾಯಿತು. ಒಂಟಿಹೆಣ್ಣಿನ ತಾಳತಪ್ಪಿದ ಬದುಕಿನ ಸೂಕ್ಷ್ಮ ಚಿತ್ರಣ ಇರುವ 'ಕೋಗಿಲೆ' (ಮೂಲ: ಮೀನಾ ಕಾಕೊಡಕಾರ, ಕನ್ನಡಕ್ಕೆ: ಗೀತಾ ಶೆಣೈ) ಕತೆ ವಿಶಿಷ್ಟವಾಗಿತ್ತು. ಕಲಾವಿದ ಎಂ.ಬಿ. ಪಾಟೀಲರ ಕುರಿತ ಬರಹ ಸಕಾಲಿಕ.

**ಬಿ. ಲೋಕೇಶ್‌ಕುಮಾರ್, ಮೈಸೂರು**

ಪ್ಲೇಗು' (ಗೋಪಾಲಕೃಷ್ಣ ಪೈ) ಕತೆ ಚೆನ್ನಾಗಿತ್ತು. ನಾವು ಪ್ಲೇಗಿಗೆ ಮದ್ದು ಕಂಡುಹಿಡಿದಿದ್ದರೂ ಕಸದ ರಾಶಿಗೆ ಪರಿಹಾರ ಕಂಡುಕೊಂಡಿಲ್ಲ ಎನ್ನುವ ಅಂಶವನ್ನು ಈ ಕತೆ ಎತ್ತಿ ಹಿಡಿಯುತ್ತದೆ.

**ಸೌದಾಮಿನಿ ಕಾಮತ್, ಮಂಗಳೂರು**

'

'ಬ್ರಾಹ್ಮಣ್ಯ ಬಿಟ್ಟರೂ ಕಾರ್ಪಣ್ಯ ಬಿಡಲಿಲ್ಲ' (ನಾಗರಾಜ ವಸ್ತಾರೆ) ಪ್ರಬಂಧ ಆಪ್ತವಾಗಿತ್ತು. 'ನನ್ನ ಕಥಾಪ್ರಸಂಗ'ದಲ್ಲಿ ಕತೆಗಾರ ಕೆ.ಎನ್. ಗಣೇಶಯ್ಯ ಅವರ ನಿರೂಪಣೆ ಕುತೂಹಲಕಾರಿಯಾಗಿತ್ತು.

**ಎಸ್.ಎನ್. ಮೋಹನ್, ಹುಬ್ಬಳ್ಳಿ**

ಕರ್ಕಿ ಕೃಷ್ಣಮೂರ್ತಿ ಅವರ ಕತೆ 'ಕಡಲ ನಡುವಣ ಹಡಗು' ಓದಿಸಿಕೊಂಡು ಹೋಯಿತು. ಕತೆಯ ಅಂತ್ಯ ಇಷ್ಟವಾಗಲಿಲ್ಲ.

**ವೆಂಕಟೇಶ ಮುದಗಲ್, ಕಲಬುರ್ಗಿ**